ಅಷ್ಟೇ ಅಲ್ಲದೆ ಬೇರೆ ಯಾವುದೇ ಸಲಹೆ, ಮಾರ್ಗದರ್ಶನ ಬೇಕಾದರೆ ಯಾವುದೇ ಸಂಕೋಚವಿಲ್ಲದೆ ತನ್ನನ್ನು ಬಂದು ಕೇಳಬೇಕು ಎಂದ ಅವರ ಆದೇಶದ ಮೇರೆಗೆ ಯಾವಾಗಲೂ ಅವರನ್ನು ಭೇಟಿ ಮಾಡುತ್ತ ಬಹಳಷ್ಟು ಅಂತರ ಕಾಲೇಜು ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನವನ್ನು ಗೆಲ್ಲುತ್ತಿದ್ದ. ತರಗತಿಯ ವಿಷಯ ಮತ್ತು ಪರೀಕ್ಷೆಗಳ ಬಗ್ಗೆ ಯಾರನ್ನೂ ಕೇಳುವ ಅಗತ್ಯವಂತೂ ಇರಲೇ ಇಲ್ಲ ಅವನಿಗೆ.

ಸ್ಕಾಲರ್‌ಶಿಪ್ ಹಣ ಮತ್ತು ಬಹುಮಾನವಾಗಿ ಕೆಲವೊಮ್ಮೆ ಬರುತ್ತಿದ್ದ ನಗದು ಹಣವನ್ನು ಜೋಪಾನವಾಗಿಟ್ಟುಕೊಂಡು ತಿಂಗಳಿಗೋ ಎರಡು ತಿಂಗಳಿಗೋ ಊರಿಗೆ ಹೋಗುತ್ತಿದ್ದವ ಅಮ್ಮನಿಗೆ ಕೊಡುತ್ತಿದ್ದ. ಪ್ರತಿಸಲ ಮಗನಿಂದ ಹಣ ತೆಗೆದುಕೊಳ್ಳುವಾಗಲೂ ಆ ತಾಯಿಯ ಕಣ್ಣಲ್ಲಿ ನೀರು. ಆಗೆಲ್ಲ ಇವ 'ಅಮ್ಮ ಇದೆಲ್ಲ ನಿನ್ನ ಬೆವರಿನ ಹಣವೇ...' ಎಂದು ಹೇಳುತ್ತಿದ್ದರೆ ತಾಯಿಯ ದುಃಖ ಕಟ್ಟೆಯೊಡೆಯುತ್ತಿತ್ತು.

ಅದೇ ಪ್ರೊಫೆಸರ್ ಒತ್ತಾಯಿಸಿದರೂ ಮತ್ತು ಮೆರಿಟ್‌ನಲ್ಲಿಯೇ ಸೀಟು ಸಿಗುತ್ತಿತ್ತಾದರೂ ಎಂಜಿನಿಯರಿಂಗ್, ಮೆಡಿಕಲ್ ಒಂದಕ್ಕೂ ಹೋಗದೆ ಅದೇ ಕಾಲೇಜಿನಲ್ಲಿ ಡಿಗ್ರಿಗೆ ಸೇರಿದ್ದ. ಅಲ್ಲೂ ಅಷ್ಟೆ. ಮುಂದುವರಿದ ಪ್ರೊಫೆಸರ್ ಅವರ ನಿರಂತರ ಪ್ರೋತ್ಸಾಹ ಮತ್ತು ಇವನ ಛಲ ಅವನನ್ನು ಬೆಳೆಸಿತ್ತು. ಪ್ರವೇಶಿಸಿದ ಕ್ಷೇತ್ರಗಳಲ್ಲೆಲ್ಲ ತನ್ನ ಛಾಪನ್ನು ಮೆರೆದಿದ್ದ.

ಡಿಗ್ರಿಯ ಫೈನಲಿನಲ್ಲಿ ಯೂನಿವರ್ಸಿಟಿಗೆ ಮೊದಲ ಸ್ಥಾನ ಬಂದಿದ್ದ. ಅಭಿನಂದನಾ ಸಮಾರಂಭದಲ್ಲಿ ಸ್ಟೇಜಿನಿಂದ ಕೆಳಗಿಳಿದು ಓಡಿದವ ಮುಂದಿನ ಸಾಲಿನಲ್ಲಿ ಕುಳಿತಿದ್ದ ಪ್ರೊಫೆಸರ್ ಅವರನ್ನು ಎಳೆದುಕೊಂಡೇ ಸ್ಟೇಜಿಗೆ ಬಂದಿದ್ದ; ಅಲ್ಲಿ ಅವರ ಕಾಲಿಗೆ ಉದ್ದಂಡವಾಗಿ ನಮಸ್ಕರಿಸಿದ್ದೂ ಅಲ್ಲದೆ ಅವರಲ್ಲದೇ ಇದ್ದಿದ್ದರೆ ತನಗೆ ಇದು ಯಾವುದೂ ಸಾಧ್ಯವಾಗುತ್ತಿರಲಿಲ್ಲ ಎನ್ನುವುದರ ಬಗ್ಗೆ ಮೂರು ನಿಮಿಷಗಳ ಕಾಲ ಮಾತನಾಡಿದ್ದ. ಕಣ್ಣಲ್ಲಿ ನೀರು ಸುರಿಸುತ್ತಿದ್ದ ಪ್ರೊಫೆಸರ್ ಗದ್ಗದ ಸ್ವರದಲ್ಲಿಯೇ ಮಕ್ಕಳಿಲ್ಲದ ತಾನು ಅವನನ್ನು ತನ್ನ ಮಗನೆಂದು ಸ್ವೀಕರಿಸಿದ್ದು ಬಿಟ್ಟರೆ ಉಳಿದೆಲ್ಲ ಅವನ ಸ್ವಂತ ಶ್ರಮದಿಂದಲೇ ಆಗಿದ್ದು. ಹಳ್ಳಿಯ ಹುಡುಗನೊಬ್ಬ ಮನೆಯಿಂದ ಯಾವುದೇ ನೆರವು ಪಡೆಯದೆ ಈ ತೆರನ ಸಾಧನೆ ಮಾಡಲು ಸಾಧ್ಯವಾಗಿದ್ದು ಅವನ ಹಟದಿಂದಲೇ ವಿನಃ ತನ್ನ ಸಹಕಾರದಿಂದಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳಿದ್ದರು.

ಡಿಗ್ರಿ ಮುಗಿಸಿದವ ಇನ್ನೇನು ಕೆಲಸ ಹುಡುಕಲಿಕ್ಕೆ ತಯಾರಾಗಿದ್ದ. ಪ್ರೊಫೆಸರರೇ ಅಡ್ಡ ಬಂದಿದ್ದರು. 'ಯಾವುದೋ ಆಫೀಸಿನಲ್ಲಿ ಗುಮಾಸ್ತನೋ ಇಲ್ಲ ಸೇಲ್ಸ್ ಮ್ಯಾನೋ ಆಗಿ ಕಾಲ ಕಳೆಯುತ್ತೀಯ? ನಾನೇ ಸಹಾಯ ಮಾಡುತ್ತೇನೆ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟಿನ ಪ್ರವೇಶ ಪರೀಕ್ಷೆಗೆ ಕುಳಿತುಕೋ... ತಯಾರಿಗೆ ಬೇಕಾದ ಎಲ್ಲ ಸಹಾಯವನ್ನೂ ನಾನು ಮಾಡುತ್ತೇನೆ... ಬೇಕಾದರೆ ನನ್ನ ಮನೆಯಲ್ಲಿಯೇ ಇರುವಿಯಂತೆ. ಅಥವಾ ಹಾಸ್ಟೆಲಿನಲ್ಲಿ ಮುಂದುವರಿಯುವುದಾದರೆ ಅದಕ್ಕೂ ವ್ಯವಸ್ಥೆ ಮಾಡೋಣ' ಎಂದಿದ್ದರು.

ಪ್ರೊಫೆಸರರ ಋಣದಲ್ಲಿ ಸಾಕಷ್ಟು ಬಿದ್ದಿದ್ದೇನೆ ಅನ್ನಿಸಿ ಅವ 'ಇಲ್ಲ ಸರ್... ಹಾಸ್ಟೆಲಿನಲ್ಲಿಯೇ ಇರುತ್ತೇನೆ... ಜೊತೆಗೇ ಎಲ್ಲಾದರೂ ಪಾರ್ಟ್ ಟೈಮ್ ಕೆಲಸಕ್ಕೂ ಸೇರಿಕೊಳ್ಳುತ್ತೇನೆ' ಎಂದಿದ್ದ. ಅವನ ಬುದ್ಧಿಮತ್ತೆಯ ಮೇಲೆ ನಂಬಿಕೆಯಿದ್ದಿದ್ದರೂ ಪ್ರೊಫೆಸರ್ ಬಿಟ್ಟಿರಲಿಲ್ಲ. 'ನಿನಗೆ ಖರ್ಚಿಗೆ ತೊಂದರೆಯಾಗದಂತೆ ನಾನು ನೋಡಿಕೊಳ್ಳುತ್ತೇನೆ ನೀನು ಪೂರ್ತಿಯಾಗಿ ಅಭ್ಯಾಸದಲ್ಲಿಯೇ ಮುಳುಗಬೇಕು' ಎಂದು ತಾಕೀತು ಮಾಡಿದ್ದರು.

ಬೆಳಿಗ್ಗೆ ಮತ್ತು ಸಂಜೆ ಅವರ ಮನೆಯಲ್ಲಿ ಮತ್ತೆ ಕೆಲವೊಮ್ಮೆ ಅವರ ಬಿಡುವಿನ ವೇಳೆ ತಿಳಿದುಕೊಂಡು ಕಾಲೇಜಿನಲ್ಲಿಯೂ ಅವರನ್ನು ಭೇಟಿ ಮಾಡುತ್ತ ತಯಾರಿ ಮಾಡಿದ ಅವ ಮೊದಲ ಬಾರಿಗೇ